ಹಸ್ಬೆಂಡ್ ಇದ್ದಾರೆ – ಆಗಬಹುದಾ?" ಅಂದೆ. "ಅವರನ್ನೇ ಕಾಣಬೇಕು. ಯಾವಾಗ ಬರ್ತಾರೆ?" ಎಂದು ಮನೆಯ ಕಡೆ ದಿಟ್ಟಿಸಿದಳು. ಉಟ್ಟ ಬಟ್ಟೆಯನ್ನು ಮೇಲೆತ್ತಿ ಕಟ್ಟಿ ತೆಂಗಿನ ಕಟ್ಟೆಯಲ್ಲಿ ಬುಡ ಬಿಡಿಸಿ ಗೊಬ್ಬರವಿಡಲು ಹೊರಟಿದ್ದೆ. ಕೈಕಾಲಿಗೆ ಮೆತ್ತಿದ ಮಣ್ಣು, ಹಣೆಯಲ್ಲಿ ಬೆವರು, ಕೆದರಿದ ತಲೆಯಲ್ಲಿದ್ದೆ. ಅರ್ಧಗಂಟೆ ಅವಧಿಗೇ ಬೆಳಗಿನಿಂದ ದುಡಿದ ದಿನಗೂಲಿಯವನಂತೆ ದಣಿದು ನಿಂತಿದ್ದೆ. ನನ್ನನ್ನು ಪೂರಾ ಕಡೆಗಣಿಸಿ ಹುಡುಗಿ ತೆರೆದ ಬಾಗಿಲ ಕಡೆಗೆ ನಡೆದಳು. ಮನೆಯ ಪಕ್ಕದಲ್ಲಿ ಹೊಸದಾಗಿ ಕಟ್ಟಿಸಿ ಪೈಂಟ್ ಮಾಡಿ, ಡೆಸ್ಕ್, ಬೆಂಚು, ಜೋಡಿಸಿದ್ದ ಟ್ಯೂಶನ್ ಹಾಲನ್ನು ಕಂಡು ಅಲ್ಲೇ ನಿಂತಳು. ಲಲಿತಾ ಮಾರ್ಕೆಟಿಂದ ಬರುವುದು ಇನ್ನೊಂದಿಷ್ಟು ಹೊತ್ತಾಗಬಹುದು. ಹಿಂಬಾಗಿಲ ಕಡೆಯಿಂದ ಮನೆಯೊಳಗೆ ಹೋಗಿ ಕೈಕಾಲು ತೊಳೆದು ಮೈಮೇಲೆ ಒಂದು ಶರ್ಟನ್ನೆಳೆದುಕೊಂಡು ಹೊರಗೆ ಬಂದೆ. "ಹೆಸರೇನಮ್ಮಾ?" ಅಂದಾಗ ಕ್ಷಣಮಾತ್ರಕ್ಕೆ ಮುಖದಲ್ಲಿ ಮೂಡಿದ ವಿಸ್ಮಯವನ್ನು ಅದುಮಿಟ್ಟು ತೀರಾ ಸಹಜವಾಗಿ, "ಕ್ಷಮಾ" ಎಂದಳು. ನಸು ನಕ್ಕಳು. ಮತ್ತದೇ ನಗು!

ಈ ನೋಟ ಮತ್ತು ನಗು, ಕಾಲಗರ್ಭದ ಆಳಕ್ಕೆ – ಅದಾವುದೋ ಒಂದು ಆಯಾಮಕ್ಕೆ ಎಳೆದೊಯ್ಯುತ್ತಿರುವಂತೆ – ಏನೇನೋ ಅನಿಸಿಕೆಗಳು. ತನ್ನದಾದ ಮೋಹದ ಮೋಡಿಯಲ್ಲಿ ತನಗರಿವಿಲ್ಲದೆ ಹುಡುಗಿ ಹಿಂದು ಹಿಂದಕ್ಕೆ ಎಳೆದೊಯ್ಯುತಿರುವಂತೆ ಅತ್ಯಂತ ಯಾಂತ್ರಿಕವಾಗಿ ಕಳೆದ ದಶಕಗಳನ್ನೆಲ್ಲ ಕೈಹಿಡಿದು ದಾಟಿಸಿ ಮತ್ತೆ ಮೊದಲಿನ ಒಂದು ಬಿಂದುವಿನಲ್ಲಿ ತಂದು ನಿಲ್ಲಿಸಿರುವಳೇ? ಹಗಲಿರುಳುಗಳಲ್ಲಿ ಅರ್ಥವಿಲ್ಲದ ನಿರ್ಗುಣ ನಿಲುವಿನಿಂದ ಕಳಚಿ ಬೆಳಕಿನದೊಂದು ವರ್ತುಲದೊಳಗೆ ಸೆಳೆದು ಸೇರಿಸಿದಂತೆ – ಲಲಿತಾ ಗಮನಿಸಬಹುದೇ? ಏನಂದುಕೊಳ್ಳಬಹುದು? ಎಪ್ಪತ್ತರ ಅಸಹಾಯಕ ಆಸ್ಥೆಗೆ ಇಪ್ಪತ್ತರ ಆದರ, ಆಸರೆ – ಅಷ್ಟೇ. ಮತ್ತೇನಿದೆ? ನನಗಿಂತ ಹೆಚ್ಚೇ ಎನಿಸುವಂತೆ ಕ್ಷಮಾ ಲಲಿತೆಯನ್ನು ಒಟ್ಟು ಮೊತ್ತವಾಗಿ ಸ್ವಾಧೀನಿಸಿ ಸ್ವಂತವಾಗಿರಿಸುವುದು ಸ್ಪಷ್ಟವಾಗಿತ್ತು. ಇದುವರೆಗೆ ಟ್ಯೂಶನಿಗೆ ಬಂದವರೆಷ್ಟಿದ್ದರೂ ಪಾಠಗಳಿಂದಾಚೆ ಬಾಂಧವ್ಯ ಪರಿಮಿತವಾಗಿತ್ತು, ಕಾಲೇಜಲ್ಲಿ ಉಪನ್ಯಾಸಕಿಯಾಗಿದ್ದ ದಿನಗಳಿಗಿಂತ ನಿವೃತ್ತಿಯ ನಂತರ ಲಲಿತೆ ಹೆಚ್ಚು ಅಂತರ್ಮುಖಿಯಾಗಿದ್ದಳು. ಟೈಂಪಾಸ್ ಅಂತ ತೊಡಗಿದ ಮನೆಪಾಠ ದಿನದ ಅಷ್ಟೂ ಗಂಟೆಗಳನ್ನು ಕ್ರಮಬದ್ಧವಾಗಿ ಕಳೆದು, ಜೀವನ ಸೂತ್ರವನ್ನು ಶ್ರದ್ಧೆಯ ಶಲಾಕೆಗೆ ಕಟ್ಟಿ ನಿಲ್ಲಿಸಲು ನೆರವಾಯ್ತು. ಯಾವುದೇ ಸಂಬಂಧವಾದರೂ ಒಂದು ಕ್ರಿಯೆಯಿಂದ ಹುಟ್ಟಬಹುದು. ಅದು ಉಳಿಯಬೇಕಾದರೆ, ಇನ್ನು ಬೆಳೆಯಬೇಕಾದರೆ ಪೂರಕವಾದ ಪ್ರತಿಕ್ರಿಯೆಗಳಿರಲೇಬೇಕು.

ಲಲಿತೆಯ ಮಮತೆಯ ಮುನ್ನುಡಿಯಲ್ಲಿ ಹುಡುಗಿಯ ಹೊಸ ದಿನಗಳ ಪುಟಗಳು ಕಳೆಗೂಡುತ್ತಿದ್ದವು. ಹೆಚ್ಚೆಚ್ಚು ಪಾರದರ್ಶಕಳಾಗುತ್ತಿದ್ದಳು. ಪಾದರಸದಂತಹ ಚುರುಕಲ್ಲವಾದರೂ ನಡೆ ನುಡಿಗಳಲ್ಲಿ ಗಮನೀಯ ಸಂಚಲನ ಮೂಡಿ ಸಂವೇದನೆಗಳ ವಿನಿಮಯ ತೊಡಗಿತ್ತು. ಉಳಿದ ಮಕ್ಕಳಂತೆ ಮೊಬೈಲಿಗೆ, ಲ್ಯಾಪ್‌ಟಾಪಿಗೆ, ಟ್ಯಾಬಿಗೆ ಅತಿಯಾಗಿ ಅಂಟಿಕೊಂಡು ಮತ್ತೆಲ್ಲವನ್ನು ಅಲ್ಲಗಳೆಯುವ ಪ್ರವೃತ್ತಿ ಕಂಡುಬರಲಿಲ್ಲ. ಒಡನಾಟದ ಹಂಬಲ ಹಸಿಯಾಗಿತ್ತು. ಬಂದ ಮೂರುತಿಂಗಳೊಳಗೆ ಲಲಿತೆಯನ್ನು ಪೂರಾ ತನ್ನೊಳಗೆ ಸೆಳೆದುಕೊಂಡು ಬಿರಡೆ ಹಾಕಿಟ್ಟಳು. "ಮಕ್ಕಳಾಗುವಂತಿಲ್ಲ" ಎಂದು ಸಾಬೀತಾದ ಮೇಲೆ ಇಷ್ಟು ವರ್ಷವೂ ತನ್ನೊಳಗೆ ತಾನಾಗಿ ಉಳಿದಾಕೆಯನ್ನು ಆ ನಿರ್ಲಿಪ್ತ ನಿಲುವಿನಿಂದ ಹಿಡಿದೆತ್ತಿದ ನಲ್ಮೆ ನಮ್ಮಿಬ್ಬರ ನಡುವೆ ಇತ್ತು. ನಾವಿಬ್ಬರೂ ಅವಿಭಕ್ತ ನೆಲೆಯಲ್ಲಿ ಅಂಗೀಕರಿಸಿದ್ದೆವು, ಅನುಭವಿಸುತ್ತಿದ್ದೆವು.

C.A ಆಗಿ ಸ್ವಂತ ಆಫೀಸು ತೆರೆದಿದ್ದ ತಾಯಿ, ಲಾಯರಾಗಿ ದಿನವೆಲ್ಲ ಕೇಸು, ಕ್ಲೈಂಟುಗಳ ನಡುವೆ ಕಳೆದುಹೋದಂತಿದ್ದ ತಂದೆ – ಅದೆಂದೋ ತಪ್ಪಿಹೋದ ಹೊಂದಾಣಿಕೆ. ಮಗಳಿಗಾಗಿ ಅನಿವಾರ್ಯದ ಒಡಂಬಡಿಕೆಯಲ್ಲಿ ನೆಪಮಾತ್ರಕ್ಕೆ ಉಳಿದಿದ್ದ ದಾಂಪತ್ಯದಲ್ಲಿ ಹುಡುಗಿ ಅತಂತ್ರಳಾಗಿದ್ದಳು. ಆರ್ಥಿಕ